ಆ) ಇತ್ತೀಚಿನ ಬೆಲೆ ಏರಿಕೆಯಿಂದಾಗಿ ಸಾರಿಗೆ ಸಂಸ್ಥೆಗೆ ಬರುತ್ತಿರುವ ಪ್ರತಿದಿನದ ಆದಾಯವು ಹೆಚ್ಚಿದೆಯೇ ?

ಇ) ಹಾಗಿದ್ದರೆ ಎಷ್ಟು ? (ಡಿವಿಜನ್‌ವಾರು ವಿವರಗಳನ್ನು ಕೊಡುವುದು)

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ೧೫೦.೦೦ ಲಕ್ಷ ರೂಪಾಯಿಗಳು

ಆ) ಹೌದು

ಇ) ವಿವರಗಳು ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ವಿಭಾಗಗಳು	ದೈನಂದಿನ ಸರಾಸರಿ ಆದಾಯ (ಲಕ್ಷ ರೂ. ಗಳಲ್ಲಿ)
೧	ಬಿ. ಟಿ. ಎಸ್.	೪.೭೮
೨	ಬೆಂಗಳೂರು	೩.೨೪
೩	ಕೋಲಾರ	೧.೭೮
೪	ಮೈಸೂರು	೨.೦೬
೫	ಹಾಸನ	೨.೯೬
೬	ಮಂಗಳೂರು	೧.೭೫
೭	ಸಿರ್ಸಿ	೨.೦೦
೮	ಹುಬ್ಬಳ್ಳಿ	೨.೮೫
೯	ಬೆಳಗಾವಿ	೩.೦೧
೧೦	ವಿಜಾಪುರ	೧.೮೭
೧೧	ಗುಲ್ಬರ್ಗ	೨.೧೨
೧೨	ರಾಯಚೂರು	೦.೮೬
೧೩	ಬಳ್ಳಾರಿ	೧.೬೫

ಮೂಡಿಗೆರೆ ತಾಲ್ಲೂಕಿನಲ್ಲಿರುವ ಕೆರೆಗಳ ಸಂಖ್ಯೆ

*೬೬೯. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿರುವ ದೊಡ್ಡ ಹಾಗೂ ಸಣ್ಣ ಪ್ರಮಾಣದ ಕೆರೆಗಳ ಸಂಖ್ಯೆ ಎಷ್ಟು?

ಆ) ಈ ಕೆರೆಗಳಿಂದ ಎಷ್ಟು ಆಚ್ಚುಕಟ್ಟು ಪ್ರದೇಶಗಳಿಗೆ ನೀರು ಒದಗಿಸಲಾಗುತ್ತದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು)—

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ದೊಡ್ಡ ಪ್ರಮಾಣದ ಕೆರೆಗಳು ಯಾವುದೂ ಇಲ್ಲ. ಸಣ್ಣ ಪ್ರಮಾಣದ ೨೦೦ ಹೆಕ್ಟೇರುಗಳಿಗಿಂತ ಕಡಿಮೆ ಆಚ್ಚುಕಟ್ಟು ಇರುವ ಕೆರೆಗಳು ೨೦೬ ಇವೆ.

ಆ) ಈ ಕೆರೆಗಳಿಂದ ಮೂಡಿಗೆರೆ ತಾಲ್ಲೂಕಿನಲ್ಲಿ ೨೪೦೩ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯ ಸೌಲಭ್ಯವನ್ನು ಒದಗಿಸಲಾಗಿದೆ.